# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವ ನ್ಯಾಯಾಲಯದಲ್ಲಿ

**ಸಿ.ಸಿ. ನಂ. 1031/2023**

| ಸಾಕ್ಷಿದಾರರ ಹೆಸರು | ಗೋಪಾಲ | **P.W-2** |
|---|---|---|
| ತಂದೆಯ / ಗಂಡನ ಹೆಸರು | ಬೈರಯ್ಯ | **C.W-3** |
| ವಯಸ್ಸು | 43 ವರ್ಷ | |
| ಉದ್ಯೋಗ | ಸಿ ಪಿ ಸಿ 616 ಆಲೂರು ಪೊಲೀಸ್ ಠಾಣೆ | |
| ವಾಸ ಸ್ಥಳ | ಆಲೂರು | ದಿನಾಂಕ 03-06-2026 |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು 2021 ರಿಂದ ಮೇ 2025 ರವರಗೆ ಸಕಲೇಶಪುರ ನಗರ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 18-08-2023 ರಂದು ಕುಶಾಲನಗರ ಬಡಾವಣೆಯ ಬಿಲಾಲ್ ಮಸೀದಿಯ ರಸ್ತೆಯಲ್ಲಿ ಗಸ್ತುಕಾರ್ಯದಲ್ಲಿರುವಾಗ ಕೆ ಎ 46 ಜೆ 2653 ನಂಬರಿನ ಹೊಂಡಾ ಸ್ಕೂಟಿಯನ್ನು ತಡೆದು ನಿಲ್ಲಿಸಿ ಪರಿಶೀಲಿಸಿದಾಗ, ಸದರಿ ಸ್ಕೂಟಿಯ ಡಿಕ್ಕಿಯಲ್ಲಿ ಎರಡು ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಎರಡು ಕೆ ಜಿ ಯಷ್ಟು ಗೋಮಾಂಸ ಇರುವುದು ಕಂಡುಬಂದಿರುತ್ತದೆ. ಸದರಿ ದ್ವಿ ಚಕ್ರ ವಾಹನದಲ್ಲಿ 1 ಮತ್ತು 2 ನೇ ಆರೋಪಿತರು ಇದ್ದು ಗೋಮಾಂಸ ಸಾಗಾಟ ಮಾಡಲು ಪರವಾನಗೆ ಇದೆಯೇ ಎಂದು ವಿಚಾರಿಸಿದಾಗ, ಯಾವುದೇ ಪರವಾನಗೆ ಇರುವುದಿಲ್ಲ ಯಾವುದೋ ಅನಾಮದೇಯ ವ್ಯಕ್ತಿಯಿಂದ ಸದರಿ ಗೋಮಾಂಸವನ್ನು ಖರೀದಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಗೋಮಾಂಸವನ್ನು ಹೆಚ್ಚಿನ ಹಣಕ್ಕೆ ಮಾರಾಟ ಮಾಡುವ ಉದ್ಧೇಶದಿಂದ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಚಾಸಾ 1 ರವರು ಮತ್ತು ನಾವು ಬೆಳಗ್ಗೆ 11.15 ರಿಂದ 12.00 ಗಂಟೆಯವರೆಗೆ ಮಹಜರ್ ಮಾಡಿ ಸದರಿ ದ್ವಿ ಚಕ್ರ ವಾಹನವನ್ನು ಮತ್ತು ಆರೋಪಿತರನ್ನು

ಹಾಗೂ ಗೋಮಾಂಸವನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ನಂತರ ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲುಗಳೊಂದಿಗೆ ಮ. 12.15 ಗಂಟೆಗೆ ಠಾಣೆಗೆ ಬಂದು ಚಾಸಾ 1 ರವರು ಠಾಣಾ ಎಸ್ ಹೆಚ್ ಒ ರವರಿಗೆ ಮುಂದಿನ ಕ್ರಮಕ್ಕಾಗಿ ವರದಿಯೊಂದಿಗೆ ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ನೀಡಿರುತ್ತಾರೆ. ನಾನು ಈ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ. ನಿಪಿ 3 ರಿಂದ 6 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಜೆ ಆರ್ ಬಿ ವಕೀಲರಿಂದ**

ಸದರಿ ದಿನ ಬೆಳಗ್ಗೆ 10.15 ಗಂಟೆಗೆ ಚಾಸಾ 1 ರವರಿಗೆ ಈ ಪ್ರಕರಣದ ಬಗ್ಗೆ ಮಾಹಿತಿ ಬಂದಿರುತ್ತದೆ. ಮಾಹಿತಿ ಬಂದ ಸಮಯದಲ್ಲಿ ನಾವು ಕುಶಾಲನಗರ ಬಡಾವಣೆಯ ಬಿಲಾಲ್ ರಸ್ತೆಯ ಬಳಿ ಇದ್ದೆವು. ನಮಗೆ ಮಾಹಿತಿ ದೊರೆತ ಸ್ಥಳದಿಂದ ತಕ್ಷೀರು ಸ್ಥಳಕ್ಕೆ ಬರಲು 10 ನಿಮಿಷ ಬೇಕಾಗಿರುತ್ತದೆ. ಬಿಲಾಲ್ ರಸ್ತೆಯಿಂದ ತಕ್ಷೀರು ಸ್ಥಳಕ್ಕೆ ಬರಲು 1 ಕಿ ಮಿ ಅಂತರವಿರುತ್ತದೆ. ನಾವು ಸದರಿ ದಿನ ಬೆಳಗ್ಗೆ 10.30 ಗಂಟೆಗೆ ತಕ್ಷೀರು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಆರೋಪಿತರು ಸ್ಕೂಟಿಯಲ್ಲಿ ಬಿಲಾಲ್ ರಸ್ತೆಯಲ್ಲಿ ಬರುತ್ತಿದ್ದರು. ಆರೋಪಿತರು ಸದರಿ ಸ್ಕೂಟಿಯಲ್ಲಿ ಎಲ್ಲಿಗೆ ಹೋಗುತ್ತಿದ್ದರು ಎಂದು ನಾವು ಮಾಹಿತಿ ಪಡೆದಿರುವುದಿಲ್ಲ. ಆರೋಪಿಯು ದ್ವಿ ಚಕ್ರ ವಾಹನ ಚಲಾಯಿಸಿಕೊಂಡು ಬರುತ್ತಿದ್ದ ಸಮಯದಲ್ಲಿ ನಾವು ಸದರಿ ವಾಹನವನ್ನು ತಡೆದು ನಿಲ್ಲಿಸಿರುತ್ತೇವೆ. ಆರೋಪಿಯು ಆ ಸಮಯದಲ್ಲಿ ಓಡಿ ಹೋಗಲು ಪ್ರಯತ್ನಿಸಿರುವುದಿಲ್ಲ. ಅಂಬೇಡ್ಕರ್ ಭವನದ ಬಳಿ ಅಂಗಡಿಗಳು ಮತ್ತು ಮಟನ್ ಅಂಗಡಿ ಇರುತ್ತವೆ ಎಂದರೆ ಸಾಕ್ಷಿಯು ಅಂಗಡಿಗಳು ಇರುತ್ತವೆ ಆದರೆ ಮಟನ್ ಅಂಗಡಿ ಇರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮಾಂಸವನ್ನು ಆರೋಪಿತರು ಯಾವುದೋ ಅಪರಿಚಿತ ವ್ಯಕ್ತಿಗಳಿಂದ ಖರೀದಿ ಮಾಡಿರುವುದಾಗಿ ತಿಳಿಸಿರುತ್ತಾರೆ, ಆದರೆ ಅವರು ಯಾರಿಂದ ಖರೀದಿ ಮಾಡಿರುತ್ತಾರೆ ಎನ್ನುವ ಬಗ್ಗೆ ನಾವು ತನಿಖೆ ಮಾಡಿರುವುದಿಲ್ಲ. ಯಾವುದೇ ಮಾಂಸವನ್ನು ನೋಡಿ ಸದರಿ ಮಾಂಸವು ಯಾವ ಪ್ರಾಣಿಯ ಮಾಂಸ ಎಂದು ಗುರುತಿಸುವ ಪರಿಣಿತಿಯನ್ನು ನಾನು ಪಡೆದಿರುವುದಿಲ್ಲ. ಯಾವುದೇ ಮಾಂಸವನ್ನು ನೋಡಿ ಸದರಿ ಮಾಂಸ ಗೋಮಾಂಸ ಆಗಿರುತ್ತದೋ ಇಲ್ಲವೋ ಎಂದು ಗುರುತಿಸಲು ನನಗೆ ಸಾಧ್ಯವಿಲ್ಲ.

ಆರೋಪಿಯು ನಮ್ಮ ಮುಂಭಾಗದಿಂದ ದ್ವಿ ಚಕ್ರ ವಾಹನದಲ್ಲಿ ಬಂದಿರುತ್ತಾರೆ. ಅಂಬೇಡ್ಕರ್ ಭವನದಿಂದ ಸಕಲೇಶಪುರ ನಗರ ಠಾಣೆಯ ಕಡೆಗೆ ಸಮಾರು 100 ಅಡಿಯವರೆಗೆ ರಸ್ತೆಯು ನೇರವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಸದರಿ ದಿನ ಅಂಬೇಡ್ಕರ್ ಭವನದ ಬಳಿ ಇರುವ ಮಟನ್ ಅಂಗಡಿಯಿಂದ ಮಟನ್ ಖರೀದಿಗಾಗಿ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇಲಾಖಾ ಅಂಕಿಅಂಶಕ್ಕೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದು, ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಪಂಚರಿಗೆ ಮೌಖಿಕವಾಗಿ ಪ್ರಕರಣದ ವಿದ್ಯಮಾನವನ್ನು ತಿಳಿಸಿ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ. ತಕ್ಷೀರು ಸ್ಥಳದಲ್ಲಿ ನಾವು ಆರೋಪಿತರನ್ನು ವಿಚಾರಿಸುತ್ತಿದ್ದ ಸಮಯದಲ್ಲಿ ಸಾರ್ವಜನಿಕರು ಸೇರಿರಲಿಲ್ಲ. ಸಾಕ್ಷಿ ಮುಂದುವರೆದು ಸಾರ್ವಜನಿಕರು ಅವರ ಪಾಡಿಗೆ ತಿರುಗಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಪಿ 3 ರಿಂದ 6 ಛಾಯಾಚಿತ್ರಗಳನ್ನು ಯಾರು ತೆಗೆದಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಓ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ